

# ಅಣಶಿ ಮಳೆಯೊಡನೆ ಚಿಗುರುವ ಸಸಿಗಳು

ಮಕ್ಕಳಿಗೆ ಕೋಣೆಯ ಚೌಕಟ್ಟಿನಲ್ಲಷ್ಟೇ ಪಾಠ ಸಾಲದು. ಪ್ರಕೃತಿಯ ನಡುವೆಯೂ ಜೀವನಪಾಠ ಬೇಕು. ಮಕ್ಕಳನ್ನು ಪರಿಸರದೊಂದಿಗೆ ಬೆಸೆಯಲು ಶಿಕ್ಷಕಿಯಾದ **ಅಕ್ಷತಾ ಕೃಷ್ಣಮೂರ್ತಿ** ಅವರು ಮಾಡಿರುವ ಪ್ರಯೋಗ ಕುತೂಹಲಕರವಾಗಿದೆ. ಅದನ್ನು ಅವರ ಮಾತುಗಳಲ್ಲೇ ಕೇಳಿ.

ಮಳೆ ಬಿದ್ದೊಡನೆ ಉತ್ತರ ಕನ್ನಡ ಜಿಲ್ಲೆಯ ಅಣಶಿಯ ಶಾಲೆಯಲ್ಲಿ ಮಣ್ಣಿನ ಘಮಲು ಮೆಲ್ಲನೆ ಆವರಿಸುತ್ತದೆ. ಮಳೆಯೊಡನೆ ಸಣ್ಣ ಚಳಿಯೂ ಸೇರಿ ಮಕ್ಕಳ ಮನಸು ಅರಳುತ್ತಿರುತ್ತದೆ.

ಹೊಸ ಶೈಕ್ಷಣಿಕ ವರ್ಷದೊಂದಿಗೆ ಶಾಲೆಗಳು ತೆರೆದು, ತರಗತಿಗಳು ಕಳೆಕಟ್ಟಿವೆ. ಪಠ್ಯದ ಚಟುವಟಿಕೆಗಳ ನಡುವೆಯೂ ಶಾಲೆಯ ದೊಡ್ಡ ವರ್ಗದ ಮಕ್ಕಳು ‘ಅಕ್ಕೋರ’ ಬಳಿ ನಿಧಾನ ಬರುತ್ತಾರೆ. ಆ ಮಕ್ಕಳದೊಂದೇ ಪ್ರಶ್ನೆ: ‘ಗದ್ದೆಗೆ ಹೋಗುವ ದಿನ ಯಾವಾಗ?’

ಮಕ್ಕಳ ಪ್ರಶ್ನೆಯನ್ನು ಮೊದಲೇ ಊಹಿಸಿದಂತೆ ಅಕ್ಕೋರು ಗದ್ದೆಗೆ ಹೋಗುವ ದಿನವನ್ನೂ ಗೊತ್ತುಪಡಿಸಿಕೊಂಡಿದ್ದಾರೆ. ದಿನ ಗೊತ್ತಾದ ವಿಷಯ ಕೇಳಿಯೇ ಮಕ್ಕಳಲ್ಲಿ ಸಂಭ್ರಮದ ಕಾಮನಬಿಲ್ಲು.

ಪ್ರತಿವರ್ಷ ಶಾಲೆಯ ಹಿರಿಯ ವಿದ್ಯಾರ್ಥಿಗಳನ್ನು



ಕೃಷಿಯತ್ತ ಪುಟಾಣಿಗಳ ಕುತೂಹಲದ ಚಿತ್ತ